# 30 ತಿಂಗಳಷ್ಟೇ ಗ್ರಾಪಂ ಅಧ್ಯಕ್ಷಗಿರಿ

**ಬೆಂಗಳೂರು:** ಗ್ರಾಮ ಪಂಚಾಯಿತಿ ಅಧ್ಯಕ್ಷ-ಉಪಾಧ್ಯಕ್ಷರ ಅಧಿಕಾರಾವಧಿಯನ್ನು ಐದು ವರ್ಷದಿಂದ 30 ತಿಂಗಳಿಗೆ ಇಳಿಕೆ ಮಾಡಲಾಗಿದೆ. 1993ರ ತರುವಾಯ 2015ರವರೆಗೆ 30 ತಿಂಗಳಿಗೆ ಮೀಸಲಾತಿ ನಿಗದಿ ಮಾಡಲಾಗಿತ್ತು. 2015ರಲ್ಲಷ್ಟೇ ಒಂದು ಅವಧಿಗೆ ಐದು ವರ್ಷಗಳವರೆಗೆ ಮೀಸಲಾತಿ ನಿಗದಿಪಡಿಸಲಾಗಿತ್ತು. ಹಾಗಾಗಿ ಈ ಅವಧಿಯಲ್ಲಿ ಅಧ್ಯಕ್ಷ-ಉಪಾಧ್ಯಕ್ಷರಾಗಿದ್ದವರು ಐದು ವರ್ಷ ಅಧಿಕಾರ ನಡೆಸಿದ್ದರು. ಈಗ ಸರ್ಕಾರ ಅಧ್ಯಕ್ಷ-ಉಪಾಧ್ಯಕ್ಷರ ಹುದ್ದೆಗಳನ್ನು 30 ತಿಂಗಳಿಗೆ ನಿಗದಿಪಡಿಸಿದೆ. ರಾಜ್ಯ ಚುನಾವಣಾ ಆಯೋಗ ಈ ಕುರಿತು ರಾಜ್ಯಪತ್ರ ಪ್ರಕಟಿಸಿದೆ.



» 5 ವರ್ಷದ ಕನಸು ಕಂಡವರಿಗೆ ನಿರಾಸೆ

2020ನೇ ಸಾಲಿನ ಗ್ರಾಪಂ ಚುನಾವಣೆ ಮುಗಿದ ಬಳಿಕ ಈ ಅವಧಿ ಮೊಟಕುಗೊಳಿಸಲಾಗಿದೆ. ಈ ಬಾರಿ ಒಟ್ಟು 5 ವರ್ಷದಲ್ಲಿ ಮೊದಲ 30 ತಿಂಗಳ ಅವಧಿಗಷ್ಟೇ ಅಧ್ಯಕ್ಷ-ಉಪಾಧ್ಯಕ್ಷರ ಆಯ್ಕೆಗೆ ಆಯಾ ಜಿಲ್ಲಾಧಿಕಾರಿಗಳು ಚುನಾವಣಾ ಆಯೋಗ ಬಿಡುಗಡೆ ಮಾಡಿರುವ ಮಾರ್ಗಸೂಚಿಯಂತೆ ಮೀಸಲಾತಿ ನಿಗದಿ ಮಾಡಲಿದ್ದಾರೆ. ಅದರಂತೆ ಆಯ್ಕೆ ಪ್ರಕ್ರಿಯೆ ನಡೆಯಲಿದೆ. ಈ ಬದಲಾವಣೆಯಿಂದ 5 ವರ್ಷ ಒಬ್ಬರೇ ಗ್ರಾಪಂ ಆಡಳಿತ ಚುಕ್ಕಾಣಿ ಹಿಡಿಯುವ ಕನಸು ಕಂಡಿದ್ದವರಿಗೆ ನಿರಾಶೆ ಮೂಡಿಸಿದೆ. ಗ್ರಾಪಂ ಅಧ್ಯಕ್ಷ-ಉಪಾಧ್ಯಕ್ಷ ಹುದ್ದೆಗಳ ಸಂಖ್ಯೆಯ ಸರಿಸುಮಾರು 1/3 ರಷ್ಟನ್ನು ಹಿಂದುಳಿದ ವರ್ಗಗಳಿಗೆ ಮೀಸಲಿಡಬೇಕು. ಹಾಗೆ ನಿರ್ಧರಿಸಿ ಮೀಸಲಿರಿಸಿದ ಸಂದರ್ಭದಲ್ಲಿ ಒಂದು ವೇಳೆ ಅನುಸೂಚಿತ ಜಾತಿ, ಅನುಸೂಚಿತ ಪಂಗಡ, ಹಿಂದುಳಿದ ವರ್ಗದವರಿಗಾಗಿ ಮೀಸಲಿರಿಸಬೇಕಾದ ಹುದ್ದೆಗಳ ಒಟ್ಟು ಸಂಖ್ಯೆಯು ರಾಜ್ಯದಲ್ಲಿ ಆ ಗ್ರಾಮ ಪಂಚಾಯಿತಿಯ ಒಟ್ಟು ಹುದ್ದೆಗಳ ಸಂಖ್ಯೆಯ ಶೇಕಡ 50 ಮೀರತಕ್ಕದ್ದಲ್ಲ ಎಂದು ಹೇಳಿದೆ. ಆಯಾ ಜಿಲ್ಲಾಧಿಕಾರಿಗಳು ರಾಜ್ಯ ಚುನಾವಣಾ ಆಯೋಗದ ಮಾರ್ಗಸೂಚಿ ಅನ್ವಯ ಮೀಸಲಾತಿ ನಿಗದಿಪಡಿಸಿ ರಾಜ್ಯಪತ್ರ ಹೊರಡಿಸಲಿದ್ದಾರೆ.